Click Here to Download Annexure for this Answer

# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2232 |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎನ್ ರವಿಕುಮಾರ್ (ಮಾನ್ಯ ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸುವ ದಿನಾಂಕ | : | 26.03.2026 |
| 4. | ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ 3 ವರ್ಷದಲ್ಲಿ ಡ್ರಗ್ಸ್ ಹೊಂದಿದ ಆರೋಪದಲ್ಲಿ ಬಂದಿತರಾದವರ ಸಂಖ್ಯೆ ಎಷ್ಟು; (ಹೆಸರಿನೊಂದಿಗೆ ವಿವರ ನೀಡುವುದು) ಪ್ರಸ್ತುತ ಈ ರೀತಿಯಾಗಿ ಬಂಧಿತರಾದವರಿಗೆ ಬೇಲ್ ಪಡೆದುಕೊಂಡಿದೆಯೇ; (ಬೇಲ್ ನೀಡಿದವರ ಹೆಸರು ಮತ್ತು ವಿಳಾಸದೊಂದಿಗೆ ಮಾಹಿತಿ ನೀಡುವುದು)</td><td>ಕಳೆದ 03 ವರ್ಷದಲ್ಲಿ ಡ್ರಗ್ಸ್ ಹೊಂದಿದ ಆರೋಪದಲ್ಲಿ ಬಂಧಿತರಾದವರ ವಿವರ ಈ ಕೆಳಕಂಡಂತಿರುತ್ತದೆ ಹಾಗೂ ಬಂಧಿತರಾದವರ ಹೆಸರು ಮತ್ತು ಬೇಲ್ ನೀಡಿದವರ ಹೆಸರು, ವಿಳಾಸವನ್ನು ಸಾಫ್ಟ್ ಕಾಪಿಯನ್ನು pen-drive ನಲ್ಲಿ ಒದಗಿಸಲಾಗಿದೆ.
<table>
<tr><th>ಕ್ರ ಸಂ</th><th>ವರ್ಷ</th><th>ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸಂಖ್ಯೆ</th><th>ಬಂಧಿತರಾದವರ ಸಂಖ್ಯೆ</th><th>ಪ್ರಕರಣಗಳಲ್ಲಿ ಬೇಲ್ ಪಡೆದವರ ಸಂಖ್ಯೆ</th><th>ನ್ಯಾಯಾಲಯದಲ್ಲಿ ಶಿಕ್ಷೆಯಾಗಿರುವ ಸಂಖ್ಯೆ</th></tr>
<tr><td>1</td><td>2023</td><td>6767</td><td>8757</td><td>7852</td><td>3854</td></tr>
<tr><td>2</td><td>2024</td><td>4188</td><td>6067</td><td>3787</td><td>2017</td></tr>
<tr><td>3</td><td>2025</td><td>6827</td><td>8339</td><td>5068</td><td>2081</td></tr>
<tr><td>4</td><td>2026</td><td>2401</td><td>3123</td><td>2225</td><td>69</td></tr>
<tr><td colspan="2">ಒಟ್ಟು</td><td>20183</td><td>26286</td><td>18932</td><td>8021</td></tr>
</table></td></tr>
<tr><td>(ಆ)</td><td>ಕಳೆದ 3 ವರ್ಷಗಳಲ್ಲಿ ಡ್ರಗ್ಸ್ ದಂದೆಯ ಕೇಸ್ ನಲ್ಲಿ ಬಂಧಿತರಾದ ವ್ಯಕ್ತಿಗಳ ಸಂಖ್ಯೆ ಎಷ್ಟು; ಎಷ್ಟು ಜನರ ಮೇಲೆ ಎಫ್ ಐ ಆರ್ ದಾಖಲಾಗಿದೆ; ಕಳೆದ 3 ವರ್ಷಗಳಲ್ಲಿ ಎಷ್ಟು ಡ್ರಗ್ಸ್ ದಂದೆಯ ಪ್ರಕರಣಗಳು ನ್ಯಾಯಾಲಯದಲ್ಲಿ ಸಾಬೀತಾಗಿ ಶಿಕ್ಷೆಯಾಗಿದೆ; (ಪ್ರಕರಣದೊಂದಿಗೆ ವಿವರ ನೀಡುವುದು)</td><td>ಕಳೆದ 03 ವರ್ಷದಲ್ಲಿ ಡ್ರಗ್ಸ್ ಹೊಂದಿದ ಆರೋಪದಲ್ಲಿ ಬಂಧಿತರಾದವರು, ದಾಖಲಾದ ಎಫ್.ಐ.ಆರ್ ಪ್ರಕರಣಗಳು ಮತ್ತು ನ್ಯಾಯಾಲಯದಲ್ಲಿ ಸಾಬೀತಾಗಿ ಶಿಕ್ಷೆಯಾಗಿರುವ ವಿವರವನ್ನು ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ರ. ಸಂ</th><th>ವರ್ಷ</th><th>ಎನ್ ಡಿಪಿಎಸ್ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸಂಖ್ಯೆ</th><th>ಬಂಧಿತರಾದವರ ಸಂಖ್ಯೆ</th><th>ಪ್ರಕರಣಗಳಲ್ಲಿ ಬೇಲ್ ಪಡೆದವರ ಸಂಖ್ಯೆ</th><th>ನ್ಯಾಯಾಲಯದಲ್ಲಿ ಶಿಕ್ಷೆಯಾಗಿರುವ ಸಂಖ್ಯೆ</th></tr>
<tr><td>1</td><td>2023</td><td>6767</td><td>8757</td><td>7852</td><td>3854</td></tr>
<tr><td>2</td><td>2024</td><td>4188</td><td>6067</td><td>3787</td><td>2017</td></tr>
<tr><td>3</td><td>2025</td><td>6827</td><td>8339</td><td>5068</td><td>2081</td></tr>
<tr><td>4</td><td>2026</td><td>2401</td><td>3123</td><td>2225</td><td>69</td></tr>
<tr><td colspan="2">ಒಟ್ಟು</td><td>20183</td><td>26286</td><td>18932</td><td>8021</td></tr>
</table></td></tr>
<tr><td>(ಇ)</td><td>ಡ್ರಗ್ಸ್ ದಂದೆಯಲ್ಲಿ ಶಾಮೀಲಾಗಿರುವ ಕುರಿತು ಪೊಲೀಸ್ ಅಧಿಕಾರಿಗಳ ಮೇಲೆ ಎಷ್ಟು ಪ್ರಕರಣ ದಾಖಲಾಗಿದೆ; ಪ್ರಸ್ತುತ ಈ ಪ್ರಕರಣಗಳು ಯಾವ ಹಂತದಲ್ಲಿವೆ;</td><td>ಡ್ರಗ್ಸ್ ದಂಧೆಯಲ್ಲಿ ಶಾಮೀಲಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರವನ್ನು ಅನುಬಂಧ ರಲ್ಲಿರಿಸಿದೆ.</td></tr>
</table>

| | | |
|---|---|---|
| (ಈ) | ಇತ್ತೀಚಿನ ದಿನಗಳಲ್ಲಿ ಕೇರಳ, ಮಹಾರಾಷ್ಟ್ರ, ದೆಹಲಿ ಹಾಗೂ ಇತರ ರಾಜ್ಯಗಳ ಪೊಲೀಸರು ಬೆಂಗಳೂರು ಹಾಗೂ ಮೈಸೂರಿನ ಡ್ರಗ್ಸ್ ಫ್ಯಾಕ್ಟರಿಗಳ ಮೇಲೆ ದಾಳಿ ಮಾಡುತ್ತಿರುವುದು ಸರ್ಕಾರ ರಾಜ್ಯ ಪೊಲೀಸರು ಡ್ರಗ್ಸ್ ದಂದೆಕೋರರೊಂದಿಗೆ ಶಾಮೀಲಾಗಿದ್ದಾರೆ ಎಂಬ ಕಾರಣಕ್ಕಾಗಿಯೇ; ಕರ್ನಾಟಕ ರಾಜ್ಯದ ಪೊಲೀಸರು ಕಳೆದ 2 ವರ್ಷಗಳಲ್ಲಿ ಬೇರೆ ಯಾವ ರಾಜ್ಯದಲ್ಲಿ ದಾಳಿ ಮಾಡಿ ಡ್ರಗ್ಸ್ ದಂದೆಕೋರರನ್ನು ಸೆರೆ ಹಿಡಿದಿರುತ್ತಾರೆ? (ವಿವರ ನೀಡುವುದು) | ಕಳೆದ 02 ವರ್ಷ ಗಳಲ್ಲಿ ಡ್ರಗ್ಸ್ ಧಂಧೆಕೋರರನ್ನು ಸೆರೆ ಹಿಡಿಯಲು ಕರ್ನಾಟಕ ರಾಜ್ಯದಿಂದ ಹೊರ ರಾಜ್ಯಕ್ಕೆ ಹೋಗಿ ದಾಳಿ ಮಾಡಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |

ಒಇ 32 ಪಿಎನ್‌ಡಿ 2026

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

# ಅನುಬಂಧ

| ಕ್ರ. ಸಂ. | ಅಧಿಕಾರಿಯ ಹೆಸರು ಮತ್ತು ಹುದ್ದೆ | ಷರಾ |
|---|---|---|
| 1. | ಶ್ರೀ ಮುತ್ತುರಾಜ್ ಹೆಚ್, ಪೊಲೀಸ್ ನಿರೀಕ್ಷಕರು, ಶ್ರೀ ಉಮೇಶ್, ಪಿಎಸ್ಐ., ಶ್ರೀ ಬಸವರಾಜ ಅಳ್ಳೊಳ್ಳಿ, ಪಿಸಿ 14059, ಶ್ರೀ ಫೈರೋಜ್ ಖಾನ್, ಎಎಸ್ಐ, ಶ್ರೀ ಮಹೇಶ, ಎಎಸ್ಐ ಮತ್ತು ಶ್ರೀ ಮಂಜುನಾಥ, ಹೆಚ್‌ಸಿ 8118, ರಾಮಮೂರ್ತಿ ನಗರ ಪೊಲೀಸ್ ಠಾಣೆ, ಬೆಂಗಳೂರು ನಗರ | ದಿನಾಂಕ:28/08/2024 ರ ರಾತ್ರಿ ಶ್ರೀ ಈರಯ್ಯ ಹಿರೇಮಠ, ಹೆಚ್.ಸಿ.-11107 ರವರು ಡ್ರಗ್ ಪೆಡ್ಲರ್ ಟೋನಿ @ ಆಂಟೋನಿ ಎಂಬಾತನನ್ನು ವಶಕ್ಕೆ ಪಡೆದು, ಆತನ ಬಳಿ ಇದ್ದ ನಾಲ್ಕು ಮಾದಕ ಮಾತ್ರೆ, ಒಂದು ಚಾಕು, 22 ರಿಂದ 23 ಸಾವಿರ ರೂಪಾಯಿ ಹಣ, ಮೊಬೈಲ್ ಫೋನ್ ಇತ್ಯಾದಿ ಸಾಕ್ಷ್ಯಾಧಾರಗಳ ಸಮೇತ ಆರೋಪಿಯನ್ನು ಠಾಣೆಗೆ ತಂದು ಹಾಜರುಪಡಿಸಿ ವರದಿಯನ್ನು ನೀಡಿದ್ದರೂ ಸಹಿತ ಡ್ರಗ್ ಪೆಡ್ಲರ್ ಟೋನಿ @ ಆಂಟೋನಿ ವಿರುದ್ಧ ಯವುದೇ ಕಾನೂನು ಕ್ರಮ ಜರುಗಿಸದೇ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಶ್ರೀ ಮುತ್ತುರಾಜ್, ಪಿಐ ರವರನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಆದೇಶ ಸಂಖ್ಯೆ: 50/ಡಿಇ-1/ಆರ್-6/ಸಿಓಪಿ/2024, ದಿನಾಂಕ: 04/12/2024 ರಲ್ಲಿ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ. ಸದರಿ ಅಮಾನತ್ತಿನ ಆದೇಶವನ್ನು ಈ ಕಛೇರಿಯ ಆದೇಶ ಸಂಖ್ಯೆ: ಹೆಚ್‌ಆರ್‌ಎಂ-1(8)/90/2024-25, ದಿನಾಂಕ: 04/12/2024 ರಲ್ಲಿ ಸ್ಥಿರೀಕರಿಸಲಾಗಿರುತ್ತದೆ.<br><br>ಮುಂದುವರೆದು, ಸದರಿ ಪಿಐ ಮತ್ತು ರಾಮಮೂರ್ತಿ ನಗರ ಪೊಲೀಸ್ ಠಾಣೆಯ ಇತರ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕೆಎಸ್‌ಪಿ (ಡಿಪಿ) ನಿಯಮಗಳು 1965/22 ರ ನಿಯಮ 6 ಮತ್ತು 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿ ಅನುಬಂಧ-1 ರಿಂದ 4 ಅನ್ನು ಒಳಗೊಂಡಂತೆ ನಿರ್ದಿಷ್ಟವಾದ ಆರೋಪಗಳನ್ನು ಮಾಡಿ ದಿನಾಂಕ: 26.03.2025 ರಂದು ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ರವರಿಗೆ ಕಾರಣ ಕೇಳುವ ನೋಟೀಸ್ ಅನ್ನು ಹೊರಡಿಸಲಾಗಿದೆ. |
| 2. | ಶ್ರೀ ಮಂಜಣ್ಣ ಟಿ, ಪೊಲೀಸ್ ನಿರೀಕ್ಷಕರು, ಶ್ರೀ ಶಿವರಾಜು, ಪಿಸಿ 10138, ಶ್ರೀ ರಮೇಶ್ ಬಾನದ್, ಹೆಚ್‌ಸಿ 10554, ಶ್ರೀ ಮಧುಸೂದನ್ ಬಿ ಕೆ, ಹೆಚ್ ಸಿ 11742, ಶ್ರೀ ಪ್ರಸನ್ನ ಕುಮಾರ್, ಪಿಸಿ 19732, ಶ್ರೀ ಆನಂದ ಮಡಿವಾಳ, ಪಿಸಿ 19974, ಶ್ರೀ ಶಂಕರ ಬೆಳಗಲಿ, ಪಿಸಿ 20233, ಶ್ರೀ ಮಹೇಶಪ್ಪ ಕೆ ಸಿ, ಹೆಚ್‌ಸಿ 12333, ಶ್ರೀ ಬಸವನೌಡ, ಹೆಚ್‌ಸಿ 12378, ಶ್ರೀ ಅಂದಪ್ಪ ಅವಾರಿ, ಹೆಚ್‌ಸಿ 11310 ಮತ್ತು ಶ್ರೀ ವಿ ಕುಮಾರ್, ಎಎಸ್ಐ ಚಾಮರಾಜಪೇಟೆ | ಚಾಮರಾಜಪೇಟೆ ಪೊಲೀಸ್ ಠಾಣೆ ಮತ್ತು ಸಿಟಿ ಮಾರ್ಕೆಟ್ ಪೊಲೀಸ್ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ಗಾಂಜಾ ಮಾರಾಟ ಮತ್ತು ಸೇವನೆ, ಕೊಲೆ ಪ್ರಯತ್ನ ಮತ್ತು ದರೋಡೆಗೆ ಪ್ರಯತ್ನದಂತಹ ಗಂಭೀರ ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿದ್ದು, ಆರೋಪಿಗಳು ವಿಚಾರಣೆ ಕಾಲದಲ್ಲಿ ತಾವು ಅಕ್ರಮವಾಗಿ ಮತ್ತು ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಟೈಡಾಲ್-100 ಮಾತ್ರೆಗಳನ್ನು ಮಾರಾಟ ಮಾಡುತ್ತಿರುವ ವಿಷಯವು ಚಾಮರಾಜಪೇಟೆ ಪೊಲೀಸ್ ಠಾಣೆ ಮತ್ತು ಸಿಟಿ ಮಾರ್ಕೆಟ್ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಗೊತ್ತಿದ್ದು, ಪ್ರತಿ ತಿಂಗಳು ರೂ.20,000/- ಗಳಂತೆ ಹಣವನ್ನು ಲಂಚವಾಗಿ ನೀಡಿ ಅವರ ಸಹಕಾರದಿಂದ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾರೆ ಹಾಗೂ |

| | | |
|---|---|---|
| | ಪೊಲೀಸ್ ಠಾಣೆ, ಬೆಂಗಳೂರು ನಗರ | ಚಾಮರಾಜಪೇಟೆ ಪೊಲೀಸ್ ಠಾಣೆಯ ಸಿಬ್ಬಂದಿಗಳ ಸ್ವ-ಇಚ್ಛಾ ಹೇಳಿಕೆಯಿಂದ ಕಂಡುಬಂದಿರುತ್ತದೆ. ಶ್ರೀ ಮಂಜಣ್ಣ ಡಿ, ಪಿಐ ರವರು ತಮ್ಮ ಠಾಣಾ ಸರಹದ್ದಿನಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳು ಮತ್ತು ಅಪರಾಧಿಕ ಪ್ರಕರಣಗಳು ಜರುಗದಂತೆ ಮುಂಜಾಗ್ರತವಾಗಿ ಗುಪ್ತ ಮಾಹಿತಿಯನ್ನು ಸಂಗ್ರಹಿಸಿ, ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿರುವ ವ್ಯಕ್ತಿಗಳ ವಿರುದ್ಧ ನಿಷ್ಪಕ್ಷಪಾತವಾಗಿ ಕಾನೂನು ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿರುವ ಕಾರಣ, ಸದರಿಯವರನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಆದೇಶ ಸಂಖ್ಯೆ:60/ಡಿಇ-1/ಆರ್-6/ಸಿಓಪಿ/2025, ದಿನಾಂಕ: 11/09/2025 ರಲ್ಲಿ ಅಮಾನತ್ತುಗೊಳಿಸಲಾಗಿರುತ್ತದೆ ಹಾಗೂ ಸದರಿ ಅಮಾನತ್ತಿನ ಆದೇಶವನ್ನು ಈ ಕಛೇರಿಯ ಆದೇಶ ಸಂಖ್ಯೆ: ಹೆಚ್‌ಆರ್‌ಎಂ-1(8)/67/2025-26, ದಿನಾಂಕ: 15/09/2025 ರಲ್ಲಿ ಸ್ಥಿರೀಕರಿಸಲಾಗಿರುತ್ತದೆ.<br><br>ಮುಂದುವರೆದು, ಸದರಿ ಪಿಐ ಮತ್ತು ಚಾಮರಾಜಪೇಟೆ ಪೊಲೀಸ್ ಠಾಣೆಯ ಇತರೆ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕೆಎಸ್‌ಪಿ (ಡಿಪಿ) ನಿಯಮಗಳು 1965/22 ರ ನಿಯಮ 6 ಮತ್ತು 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿ ಅನುಬಂಧ-1 ರಿಂದ 4 ಅನ್ನು ಒಳಗೊಂಡAತೆ ನಿರ್ದಿಷ್ಟವಾದ ಆರೋಪಗಳನ್ನು ಮಾಡಿ ದಿನಾಂಕ: 18.10.2025 ರಂದು ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ರವರಿಗೆ ಕಾರಣ ಕೇಳುವ ನೋಟೀಸ್ ಅನ್ನು ಹೊರಡಿಸಲಾಗಿದೆ. |
| 3. | ಶ್ರೀ ಚೇತನ್ ಕುಮಾರ್.ಎಂ.ಎಲ್, ಪೊಲೀಸ್ ನಿರೀಕ್ಷಕರು, ಕೊತ್ತನೂರು ಪೊಲೀಸ್ ಠಾಣೆ, ಶ್ರೀ ಶಬರೀಶ್.ವಿ.ಎಸ್, ಪೊಲೀಸ್ ನಿರೀಕ್ಷಕರು, ಬಾಗಲೂರು ಪೊಲೀಸ್ ಠಾಣೆ ಮತ್ತು ಶ್ರೀ ರಾಮಕೃಷ್ಣ ರೆಡ್ಡಿ, ಪೊಲೀಸ್ ನಿರೀಕ್ಷಕರು, ಆವಲಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ನಗರ | ಮಹಾರಾಷ್ಟ್ರದ ಎ.ಎನ್.ಟಿ.ಎಫ್ ವಿಭಾಗದ ಅಧಿಕಾರಿಗಳು ಕೊತ್ತನೂರು, ಆವಲಹಳ್ಳಿ ಹಾಗೂ ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅನಧಿಕೃತ ಚಟುವಟಿಕೆಗಳನ್ನು ಪತ್ತೆ ಮಾಡಿದ್ದು, ಸ್ಥಳೀಯ ಪೊಲೀಸ್ ಅಧಿಕಾರಿಗಳು ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಠಾಣಾ ವ್ಯಾಪ್ತಿಗಳಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಚಟುವಟಿಕೆಗಳನ್ನು ಪತ್ತೆ ಮಾಡಿ ನಿಯಂತ್ರಿಸಲು ಸಂಪೂರ್ಣ ವಿಫಲರಾಗಿರುತ್ತಾರೆ ಮತ್ತು ಕರ್ನಾಟಕ ರಾಜ್ಯದಲ್ಲಿ ಮಾದಕ ವಸ್ತುಗಳನ್ನು ಸಂಪೂರ್ಣವಾಗಿ ನಿಯಂತ್ರಿಸಿ Zero Tolerance ಮಾಡಬೇಕೆಂದು ಮೇಲಾಧಿಕಾರಿಗಳ ಆದೇಶ / ಸೂಚನೆಗಳನ್ನು ನೀಡಿದ್ದರೂ ಸಹ ಇಂತಹ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ಸಹ ವಿಫಲರಾಗಿರುತ್ತಾರೆ ಹಾಗೂ ಸರಿಯಾದ ರೀತಿಯಲ್ಲಿ ಮನೆ ಮನೆಗೆ ಪೊಲೀಸ್ ಗಸ್ತು ಮಾಡದೆ ಇರುವುದು ಕಂಡುಬರುತ್ತಿದೆ. ಠಾಣಾ ವ್ಯಾಪ್ತಿಗಳಲ್ಲಿ ಸರಿಯಾದ ರೀತಿಯಲ್ಲಿ ಮನೆ ಮನೆಗೆ ಪೊಲೀಸ್ ಗಸ್ತು ಮಾಡಿದ್ದರೆ ಇಂತಹ ತಯಾರಿಕ ಮಾಡುವ / |

| | | |
|---|---|---|
| | | ಶೇಖರಣೆ ಮಾಡುವ ಸ್ಥಳಗಳನ್ನು ಪತ್ತೆ ಮಾಡಬಹುದಿತ್ತು. ಆದರೆ ಕೊತ್ತನೂರು, ಆವಲಹಳ್ಳಿ ಹಾಗೂ ಬಾಗಲೂರು ಪೊಲೀಸರು ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಅಕ್ರಮ ಮತ್ತು ಅನಧಿಕೃತ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವ ಹಿನ್ನೆಲೆಯಲ್ಲಿ ಸದರಿಯವರುಗಳನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಆದೇಶ ಸಂಖ್ಯೆ:87/ಡಿಇ-1/ಆರ್-6/ಸಿಓಪಿ/2025, ದಿನಾಂಕ:29/12/2025 ರಲ್ಲಿ ಅಮಾನತ್ತುಗೊಳಿಸಲಾಗಿರುತ್ತದೆ ಹಾಗೂ ಸದರಿ ಅಮಾನತ್ತಿನ ಆದೇಶವನ್ನು ಈ ಕಛೇರಿಯ ಅದೇಶ ಸಂಖ್ಯೆ: ಹೆಚ್ ಆರ್‌ಎಂ-1(8)/107/2025-26, ದಿನಾಂಕ: 31/12/2025 ರಲ್ಲಿ ಸ್ಥಿರೀಕರಿಸಲಾಗಿರುತ್ತದೆ.<br><br>ಮುಂದುವರೆದು, ಸದರಿಯವರುಗಳ ವಿರುದ್ಧ ಕೆಎಸ್‌ಪಿ (ಡಿಪಿ) ನಿಯಮಗಳು 1965/22 ರ ನಿಯಮ 6 ಮತ್ತು 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿ ಅನುಬಂಧ-1 ರಿಂದ 4 ಅನ್ನು ಒಳಗೊಂಡAತೆ ನಿರ್ದಿಷ್ಟವಾದ ಆರೋಪಗಳನ್ನು ಮಾಡಿ ದಿನಾಂಕ: 02/03/2026 ರಂದು ಆರೋಪಿತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ರವರಿಗೆ ಕಾರಣ ಕೇಳುವ ನೋಟೀಸ್ ಅನ್ನು ಹೊರಡಿಸಲಾಗಿದೆ. |

| ಕ್ರ ಮ ಸಂ. | ಆಪಾದಿತ ಪೊಲೀಸ್ ಅಧಿಕಾರಿ / ಸಿಬ್ಬಂದಿ ಹೆಸರು ಮತ್ತು ಹುದ್ದೆ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಠಾಣೆ | ದೋಷಾರೋಪಣೆ | ಮೊಕದ್ದಮೆ ಸಂಖ್ಯೆ & ಕಲಂ | ಕ್ರಿಮಿನಲ್ ಪ್ರಕರಣಗಳಲ್ಲಿ ವಿಧಿಸಿರುವ ಶಿಕ್ಷೆ ಅಥವಾ ಪ್ರಸ್ತುತ ಹಂತದ ಮಾಹಿತಿ ವಿವರ | ಇಲಾಖಾ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ (ನಿಯಮ 6/7) | ಇಲಾಖಾ ಶಿಸ್ತು ಕ್ರಮದ ಅಡಿ ವಿಧಿಸಿರುವ ಶಿಕ್ಷೆ ಅಥವಾ ಪ್ರಸ್ತುತ ಹಂತದ ಮಾಹಿತಿ |
|---|---|---|---|---|---|---|---|
| **ಪೊಲೀಸ್ ಆಯುಕ್ತರು, ಬೆಂಗಳೂರು ನಗರ** | | | | | | | |
| 1. | ಶಿವಪ್ಪ.ಕೆ.ಬಿ, ಹೆಚ್.ಸಿ-210 | ಭಟ್ಟಹಳ್ಳಿ ಪೊಲೀಸ್ ಠಾಣೆ (ಒಓಡಿ ಕೆಂಚಾರ್ಲ ಹಳ್ಳಿ ಪಿ.ಎಸ್) | ಮಾನ್ಯ ನ್ಯಾಯಾಲಯದಲ್ಲಿ ಸ್ಪೆಷಲ್ ಸಿಸಿ ನಂ-2911/2023 ರಲ್ಲಿ ವಿಚಾರಣೆಯಲ್ಲಿರುತ್ತದೆ | ಆರ್.ಟಿ.ನಗರ ಪೊಲೀಸ್ ಠಾಣಾ ಮೊ.ಸಂ:105/2023, ಕಲಂ:20(b)(ii)(B)ಎನ್.ಡಿ.ಪಿ.ಎಸ್ | - | ದಿ:24.04.2023 ರಂದು ಚಿಕ್ಕಬಳ್ಳಾಪುರ ಜಿಲ್ಲೆರವರಿಗೆ ಶಿಸ್ತು ಕ್ರಮ ಜರುಗಿಪುಂತೆ ಡಿಸಿಪಿ ಉತ್ತರ ವಿಭಾಗ ರವರು ಪತ್ರವನ್ನು ಬರೆಯಲಾಗಿದೆ. | - |
| 2. | ವೈ.ವೆಂಕಟೇಶ್, ಎ.ಆರ್.ಎ.ಎಸ್.ಐ (ನಿವೃತ್ತ)<br>ಶ್ರೀಉಮೇಶ್ ಎಹೆಚ್‌ಸಿ-23030<br>ಶ್ರೀ ಲಕ್ಷ್ಮಣ ತಳವಾರ, ಎಪಿಸಿ-17927,<br>ಶ್ರೀ.ಅನ್ವರ್ ಜಮ್ಮಾ, ಎಪಿಸಿ 18626, | ಸಿಎಆರ್ ಪಶ್ಚಿಮ<br>ಸಿಎಆರ್ ಪಶ್ಚಿಮ<br>ಸಿಎಆರ್ ಉತ್ತರ<br>ಸಿಎಆರ್ ಉತ್ತರ | 1. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಚಾರಣಾ ಬಂದಿ ಸಂಖ್ಯೆ:4168/17 ಗಿರೀಶ್ ತಂದೆ ಗೋವಿಂದಪ್ಪನಗೆ 08 ಸಂಖ್ಯೆಯ ಮೊಬೈಲ್ (ಬ್ಯಾಟರಿ ಒಳಗೊಂಡಂತೆ) ಮತ್ತು ಬ್ರೌನ್ ಶುಗರ್ ರೀತಿಯಲ್ಲಿ ಕಾಣುವ ನಿಷೇದಿತ ಮಾದಕ ವಸ್ತುವನ್ನು ಸಾಗಿಸಲು ಸಹಾಯ ಮಾಡಿದ ಆರೋಪವು ಸಾಕ್ಷಿದಾರರ ಹೇಳಿಕೆ ಮತ್ತು ವಿಚಾರಣೆಯಿಂದ ಕರ್ತವ್ಯದಲ್ಲಿ ಬೇಜವಾಬ್ದಾರಿತನ ಮತ್ತು | ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ಮೊ.ಸಂ:191/2023, U/s 424 ಐಪಿಸಿ & 22(b) 21(b) ಎನ್.ಡಿ.ಪಿ.ಎಸ್ | ನ್ಯಾಯಾಲಯದ ವಿಚಾರಣ ಹಂತ ದಲ್ಲಿರುತ್ತದೆ. (Under Trail | ಕೆಎಸ್‌ಪಿ(ಡಿಪಿ) ನಿಯಮಗಳು 1965/22 (ತಿದ್ದುಪಡಿ) ನಿಯಮ 6 & 8 ರಡಿ ಜಂಟಿ ಇಲಾಖಾ ವಿಚಾರಣೆಯನ್ನು ಆದೇಶಿಸಲಾಗಿರುತ್ತದೆ. | ವಿಚಾರಣಾ ಹಂತದಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| | | | ನಿರ್ಲಕ್ಷತೆ ಪ್ರದರ್ಶಿಸಿರುವ ಬಗ್ಗೆ ಹಾಗೂ<br>2. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಚಾರಣಾ ಬಂದಿ ಸಂಖ್ಯೆ:7815/22 ರಾಮ್ ಭವಾನ್ ತಂದೆ ಅನಿಲ್‌ಗೆ 01 ಸಂಖ್ಯೆಯ ಮೊಬೈಲ್ ಮತ್ತು ಒಂದು ಸಂಖ್ಯೆ ಯು.ಎಸ್.ವಿ ಕೇಬಲ್ ಸಾಗಿಸಲು ಸಹಾಯ ಮಾಡಿದ ಆರೋಪವು ಸಾಕ್ಷಿದಾರರ ಹೇಳಿಕೆ ಮತ್ತು ವಿಚಾರಣೆಯಿಂದ ಕರ್ತವ್ಯದಲ್ಲಿ ಬೇಜವಾಬ್ದಾರಿತನ ಮತ್ತು ನಿರ್ಲಕ್ಷತೆ ಪ್ರದರ್ಶಿಸಿರು ಬಗ್ಗೆ. | | | | |

| | | | | | | | |
|---|---|---|---|---|---|---|---|
| ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ | | | | | | | |
| 3. | ಶ್ರೀ ನಾಗರಾಜ್ ಎಂ. ಸಿಹೆಚ್ ಸಿ 6041 | ಬನ್ನೇರುಘಟ್ಟ ಪೊಲೀಸ್ ಠಾಣೆ (ಅಮಾನತ್ತಿನಿಂದ ಲೀನ್ ಬದಲಾವಣೆ) | ಬಿ.ಟಿವಿ ಎಂಟರ್ ಟೈನ್‌ಮೆಂಟ್ ಮಾಧ್ಯಮದಲ್ಲಿ, ಪ್ರಸಾರವಾದ ಗಾಂಜಾ ಡೀಲಿಂಗ್ ಆಡಿಯೋ ಹಾಗೂ ಗಾಂಜಾ ಮಾರಾಟ ಮಾಡುವ ಪೆಡ್ಲರ್‌ಗಳಾದ ಅಣ್ಣಾ ಯುಸೂಫ್ ಮತ್ತು ಸೈಯದ್ ಸಲೀಂ@ಸಲ್ಲು, ಸಲ್ಮಾನ್ ರವರುಗಳೊಂದಿಗೆ ಒಡನಾಟ ಹೊಂದಿರುವುದಾಗಿ ಮಾಧ್ಯಮದಲ್ಲಿ "ಗಾಂಜಾ ಸೀಕ್ರೇಟ್ ಸ್ಟೋರಿ, ಗಾಂಜಾ ದೊರೆ ನಾಗರಾಜ್" ಇತ್ಯಾದಿ ಶೀರ್ಷಿಕೆಯಡಿಯಲ್ಲಿ ಪ್ರಸಾರವಾಗಿರುತ್ತದೆ. ಅದರಂತೆ ಸಿ.ಡಿ.ಆರ್ ದಾಖಲಾತಿಗಳನ್ನು ಪಡೆದು ಪರಿಶೀಲಿಸಲಾಗಿ ಅಪೊಲೀ ರವರು ಮೇಲ್ಕಂಡ ಆರೋಪಿಗಳೊಂದಿಗೆ ಹಲವಾರು ಬಾರಿ ದೂರವಾಣಿ ಕರೆಗಳನ್ನು ಮೊಬೈಲ್ ನಂಬರ್ ನಿಂದ ಮಾತನಾಡಿರುವುದು ಕಂಡುಬಂದಿರುತ್ತದೆ. ಅಲ್ಲದೇ ಹೊಸಕೋಟೆಯಲ್ಲಿ ರಿಯಲ್ ಎಸ್ಟೇಟ್ ಮಾಡುವ | ಹೊಸಕೋಟೆ ಪೊಲೀಸ್ ಠಾಣೆ ಮೊ.ಸಂ:315/2024 ಕಲಂ 406, 420, 405, 464, ಜೊತೆಗೆ 34 ಐಪಿಸಿ ಪ್ರಕರಣದಲ್ಲಿ - | ಕರ್ನಾಟಕ ರಾಜ್ಯ ಸೇವಾ ನಡತೆ ನಿಯಮಗಳು 2021ರ ನಿಯಮ-3ರ ಸಾಮಾನ್ಯ ತತ್ವಗಳನ್ನು ಹಾಗೂ ನಿಯಮ-24 ಅನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಇವರ ಕರ್ತವ್ಯದಲ್ಲಿನ ಅತೀವ ನಿರ್ಲಕ್ಷ್ಯತನ, ಬೇಜವಾಬ್ದಾರಿತನ, ದುರ್ನಡತೆ ಹಾಗೂ ಮೇಲಾಧಿಕಾರಿಗಳ ಬಗ್ಗೆ ಅವಿಧೇಯತೆಯನ್ನು ತೋರಿಸಿರುವುದು ಕಂಡು ಬಂದ ಕಾರಣ, ಸದರಿಯವರನ್ನು ದಿ:10.06.2025 ರಂದು ಸೇವೆಯಿಂದ ಅಮಾನತ್ತುಗೊಳಿಸ ಲಾಗಿರುತ್ತದೆ. | ಇಲಾಖಾ ಶಿಸ್ತು ಕ್ರಮವನ್ನು ಬಾಕಿ ಇರಿಸಿಕೊಂಡು ದಿ:10.12.2025 ರಂದು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ದಿ:7.1.2026 ರಂದು ನಿಯಮ 7 ರಡಿ ದೋಷಾರೋಪಣಾ ಪತ್ರ ಹೊರಡಿಸಿದೆ. ಅ.ಪೊ.ಅ ರವರು ದಿ:27.1.2026 ರಂದು ಸಮಜಾಯಿಷಿ ಸಲ್ಲಿಸಿದ್ದು, ಅಭಿಪ್ರಾಯ ವರದಿ ಗಾಗಿ ದಿ:26.2.2026 ರಂದು ಅಪರ ಎಸ್.ಪಿ. -1 ಬೆಂ.ಜಿಲ್ಲೆ ರವರಿಗೆ ಕಳುಹಿಸಲಾಗಿರುತ್ತದೆ. | |

| | | | | | | | |
|---|---|---|---|---|---|---|---|
| | | | ವ್ಯಕ್ತಿಗಳೊಂದಿಗೆ ಒಡನಾಟ ಇಟ್ಟುಕೊಂಡು ವಿವಾದಿತ ಭೂ ವ್ಯಾಜ್ಯಗಳ ಜಮೀನುಗಳಿಗೆ ಹೋಗಿ ಅಧಿಕಾರ ದುರಪಯೋಗ ಪಡಿಸಿ ಬೆದರಿಕೆ ಹಾಕಿ ಅಕ್ರಮವಾಗಿ ಕಾಂಪೌಂಡ್ ಹಾಕಿಸಿರುವುದಲ್ಲದೇ ಹೊಸಕೋಟೆ ಪೊಲೀಸ್ ಠಾಣೆ ಮೊ.ಸಂ:315/2024 ಕಲಂ 406, 420, 405, 464, ಜೊತೆಗೆ 34 ಐಪಿಸಿ ಪ್ರಕರಣದಲ್ಲಿ ವಿವಾದಿತ ಜಾಗವನ್ನು ತಮ್ಮ ಹೆಂಡತಿಯ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡು ಇಲಾಖೆಗೆ ಹಾಗೂ ಮೇಲಾಧಿಕಾರಿಗಳಿಗೆ ಮರೆ ಮಾಚಿರುವುದು ಕಂಡುಬಂದಿರುತ್ತದೆ. ಮುಂದುವರೆದು, ಠಾಣೆಗೆ ಬರುವ ಪಿರ್ಯಾದುದಾರರನ್ನು ನೇರವಾಗಿ ಅಧಿಕಾರಿಗಳಿಗೆ ಸಂಪರ್ಕಿಸದೆ ಅವರುಗಳನ್ನು ಖುದ್ದಾಗಿ ಕರೆದುಕೊಂಡು ಹೋಗಿ ಸಿವಿಲ್ ವ್ಯಾಜ್ಯಗಳನ್ನು ತಾವೇ ಬಗೆಹರಿಸಿಕೊಡುವುದಾಗಿ ಹಾಗೂ ಸಿವಿಲ್ ವ್ಯಾಜ್ಯಗಳಲ್ಲಿರುವ ಜಮೀನುಗಳನ್ನು ಮಾರಾಟ ಮಾಡಿಸಿರುವ ಆರೋಪ. | | | | |

| | | | | | | | |
|---|---|---|---|---|---|---|---|
| **ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ** | | | | | | | |
| 4. | ಮುರುಗನ್ ಸಿ.ಹೆಚ್.ಸಿ-123 | ಮುಳಬಾಗಲು ನಗರ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ. | ಎನ್.ಡಿ.ಪಿ.ಎಸ್ ಪ್ರಕರಣದಲ್ಲಿ ಆರೋಪಿಳಿಗೆ ಸಹಕರಿಸಿರುವ ಬಗ್ಗೆ. | CR NO. 57/2024 | U/S 20(B) NDPS ACT OF KOLAR TOWN PS, | 03.05.2024 | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತೆ. |
| **ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ** | | | | | | | |
| 5. | **ಶ್ರೀ ಚೆನ್ನಬಸವಯ್ಯ, ಎಎಸ್ಐ,** | **ಕೆರೆಗೋಡು ಪೊಲೀಸ್ ಠಾಣೆ,** | ಶಿಸ್ತಿನ ಪೊಲೀಸ್ ಇಲಾಖೆಯಲ್ಲಿ ಇದ್ದುಕೊಂಡು ಅಪರಾಧ ಪತ್ತೆ ಮತ್ತು ಅಪರಾಧ ತಡೆ ಉದ್ದೇಶ ಹೊಂದಿರುವ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು. ಸಮಾಜಕ್ಕೆ ಮಾದರಿಯಾಗಬೇಕಾದ ವ್ಯಕ್ತಿಯಾದ ನೀವು ಈ ರೀತಿ ಎನ್‌ಡಿಪಿಎಸ್ ಕಾಯ್ದೆಯ ಪ್ರಕರಣದಲ್ಲಿ ಮಾದಕ ವಸ್ತುಗಳ ಸಾಗಾಣಿಕೆಯ ಆರೋಪಿಗಳ ಜೊತೆ ಸೇರಿ. ಮಾದಕ ವಸ್ತುಗಳ ಸಾಗಾಣಿಕೆಗೆ ಪ್ರಚೋದಿಸುವುದು. ಸಹಾಯ ಮಾಡುವುದು. ಅವರಿಗೆ ನೆರವು ನೀಡಿ ಕರ್ತವ್ಯದಲ್ಲಿ ಅತೀವ ಲೋಪ, ಅಧಿಕಾರ ದುರ್ಬಳಕೆ. ನಿರ್ಲಕ್ಷತೆ ಹಾಗೂ | Nagamangala town PS 03/2025 Section 17 (B) NDPS Act | **ಪ್ರಕರಣ ತನಿಖೆಯಲ್ಲಿರುತ್ತದೆ** | **ನಿಯಮ**-6 & 8 **ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ** | **ವಿಚಾರಣಾಧಿಕಾರಿಯು ವಿಚಾರಣಾ ದಿನಾಂಕವನ್ನು ನಿಗಧಿಪಡಿಸಲು ಬಾಕಿ ಇರುತ್ತದೆ** |

| | | | | | | | |
|---|---|---|---|---|---|---|---|
| | | | ಬೇಜವಾಬ್ದಾರಿತನ ಪ್ರದರ್ಶಿಸಿರುವ ಬಗ್ಗೆ. | | | | |
| **ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ** | | | | | | | |
| 6. | ಶ್ರೀ ಪುರುಷೋತ್ತಮ ರಾವ್.ಎಂ.ಡಿ., ಸಿಪಿಸಿ-208, | ಈ ಹಿಂದೆ ಕೆಟಿಜೆ ನಗರ ಠಾಣೆ, ದಾವಣಗೆರೆ.<br><br>ಹಾಲಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ. | ಗಾಂಜಾ ಪ್ರಕರಣದಲ್ಲಿನ ಆರೋಪಿತರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಆರೋಪಿತರೊಂದಿಗೆ ಸೇರಿಕೊಂಡು ಸಾರ್ವಜನಿಕರಿಗೆ ಗಾಂಜಾ ಸೇವನೆ ಮಾಡಿಸಿ, ಅವರಿಗೆ ಹೆದರಿಸಿ, ಗಾಂಜಾ ಸೇವನೆ ಮಾಡಿದ ವ್ಯಕ್ತಿ ಮತ್ತು ವ್ಯಕ್ತಿಯ ಕುಟುಂಬದವರಿಂದ ಹಣ ವಸೂಲಿ ಮಾಡುತ್ತಾ, ಇಲಾಖೆಯ ಗೌರವಕ್ಕೆ ಸಾರ್ವಜನಿಕ ವಲಯದಲ್ಲಿ ಧಕ್ಕೆ ಯುಂಟಾಗುವ ರೀತಿಯಲ್ಲಿ ವರ್ತಿಸಿ, ಕರ್ತವ್ಯದಲ್ಲಿ ಅತೀವ ದುರ್ನಡತೆ ಮತ್ತು ಅಶಿಸ್ತನ್ನು ಪ್ರದರ್ಶಿಸಿರುವ ಆರೋಪ. | ಮೊಕದ್ದಮೆ ದಾಖಲಾಗಿಲ್ಲ. | ಮೊಕದ್ದಮೆ ದಾಖಲಾಗಿಲ್ಲ. | ಕೆ.ಎಸ್.ಪಿ (ಡಿಪಿ) ನಿಯಮ-7 ರಡಿಯಲ್ಲಿ ದೋಷಾರೋಪಣೆ ಹೊರಡಿಸಿರುತ್ತದೆ. | ಸದರಿಯವರ ಸಮಜಾಯಿಷಿಯನ್ನು ಒಪ್ಪದೇ 'ಎಚ್ಚರಿಕೆ' ನೀಡಿ, 47 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿರುತ್ತದೆ. |

| | | | | | | | |
|---|---|---|---|---|---|---|---|
| 7. | ಶ್ರೀ ಬಸವರಾಜ ಎಸ್ ಬಿರಾದಾರ, ಸಿಹೆಚ್‌ಸಿ-1104 | ಗಾಂಧಿಚೌಕ | ಸದರಿಯವರ ಹತ್ತಿರ ಮಾರುತಿ ಬೂದಿಹಾಳ ಸಾ::ವಿಜಯಪುರ ಇತನು ಬಂದು ರವಿಕುಮಾರ ಮೇಟಗಾರ ಇತನು ತೊಂದರೆ ಮಾಡುತ್ತಿದ್ದರಿಂದ ಅವನಿಗೆ ಏನಾದರೂ ಮಾಡಬೇಕು ಎಂದು ತಿಳಿಸಿದಾಗ ಆತನಿಗೆ ಸರಿಯಾದ ದಾರಿ ಹೇಳಿ ಕಾನೂನಿನ ಅರಿವು ಮೂಡಿಸಿ ಪೊಲೀಸ್ ಠಾಣೆಯಲ್ಲಿ ಫಿರ್ಯಾಧಿ ನೀಡಲು ತಿಳಿಸುವ ಬದಲಾಗಿ ರವಿಕುಮಾರ ಮೇಟಗಾರ ಇತನ ವಿರುದ್ಧ ಸುಳ್ಳು ಗಾಂಜಾ ಕೇಸ್ ಮಾಡಲು ಕುತಂತ್ರದಿಂದ ಪ್ಲ್ಯಾನ್ ಮಾಡಿಕೊಟ್ಟು ಅದನ್ನು ಕಾರ್ಯರೂಪಕ್ಕೆ ತರಲು ಸಹಕರಿಸಿ ಇಲಾಖಾ ಶಿಸ್ತುನ್ನು ಉಲ್ಲಂಘನೆ ಮಾಡಿರುತ್ತಾರೆ. | ಸದರಿಯವರ ವಿರುದ್ಧ ಸಿಇಎನ್ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂ: 61/2024 ಕಲಂ 20(b(ii)(o). 29 NDPS Act-1985 and 61(2) BNS ನೇದ್ದರ ಪ್ರಕರಣ ದಿನಾಂಕ: 06.12.2024. ರಂದು ದಾಖಲಾಗಿರುತ್ತದೆ. | ಸದರ ಪ್ರಕರಣವು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ರವರಲ್ಲಿ ಸಿಸಿ ನಂ:3985/2025 ರಲ್ಲಿ ವಿಚಾರಣೆಯಲ್ಲಿರುತ್ತದೆ. ಮುದ್ದತ್ತ ದಿನಾಂಕ:07.03.2026 ರಂದು ನಿಗಧಿಪಡಿಸಿರುತ್ತಾರೆ. | ಈ ಕಚೇರಿ ಆದೇಶ ಸಂ:ಸಿಬ್ಬಂದಿ-6/02/2025, ದಿನಾಂಕ:23.09.2025 ವಿಚಾರಣಾಧಿಕಾರಿಗಳು:- ಶ್ರೀ ಎ.ಕೆ ಮುಲ್ಲಾ ನಿವೃತ್ತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಸಿಟಿಎಸ್ ನಂ:10230/ಎ&ಬಿ 5ನೇ ಲೇನ್ ಶಿವಾಜಿನಗೆ ಬೆಳಗಾವಿ. **ಮಂಡನಾಧಿಕಾರಿ:-ಸಿಪಿಐ ಗೋಲಗುಮ್ಮಟ ವೃತ್ತ ರವರನ್ನು ನೇಮಿಸಿದೆ.** | **ಇಲಾಖಾ ವಿಚಾರಣೆ ದಿನಾಂಕ**:14. 02.2026 **ರಂದು ನಿಗಧಿಪಡಿಸಿದ್ದು ಮುಂದಿನ ದಿನಾಂಕ ನಿಗಧಿ ಪಡಿಸಿರುವುದಿಲ್ಲ.** |